ಮಲಯಾಳಂ ಸಾಹಿತ್ಯ ವಲಯದಲ್ಲಿ ಗುರುತಿಸಿಕೊಂಡಿರುವ ಜೇಕಬ್ ಅಬ್ರಹಾಂ ಅವರದು ಸರಳ ಕಥನ ಶೈಲಿ. ಅವರು ಬರೆದ ಕಥಾ ಸಂಕಲನ ಮತ್ತು ಕಾದಂಬರಿಗಳು ಪ್ರಕಟವಾಗಿವೆ. ಅವರ ಮೊದಲ ಕಥಾ ಸಂಕಲನ 'ಟ್ಯಾಟ್ಟೂ' ಕೇರಳ ಸಾಹಿತ್ಯ ಅಕಾಡೆಮಿಯ ಬಹುಮಾನ ಪಡೆದಿದೆ.

ಬಿಡುವಿನ ವೇಳೆಯಲ್ಲಿ ಸುಂದರವಾಗಿ ಟೈಪು ಮಾಡಿದೆ. ಹತ್ತು ಒಳ್ಳೆಯ ಕಥೆಗಳು ಮಾತ್ರವಿದ್ದವು. ಚೆನ್ನಾಗಿರುವ ಇಪ್ಪತ್ತಕ್ಕಿಂತಲೂ ಹೆಚ್ಚು ಕತೆಗಳಿದ್ದರೂ ಹತ್ತು ಸಾಕೆನಿಸಿದವು.

ಹತ್ತು ಕಥೆಗಳ ಪೈಕಿ ಅರ್ಧಕ್ಕಿಂತಲೂ ಹೆಚ್ಚಿನ ಕಥೆಗಳು ನನ್ನ ಮತ್ತು ಅವಳ ಪ್ರಣಯ ಕಾಲದ ಕಥೆಗಳಾಗಿದ್ದವು. ವಸ್ತುಗಳು ಬಹುತೇಕ ಅದೇ. ಆಗ ನಾನು ತೀವ್ರ ತೆರನಾದ ಎಡಪಂಥೀಯ ಧೋರಣೆಗಳನ್ನು ಮೈಗೂಡಿಸಿಕೊಂಡಿದ್ದೆ. ಡಿಟಿಪಿ ಸೆಂಟರಿನ ಬಿಡುವಿನ ವೇಳೆಯಲ್ಲಿ ಕಥೆಗಳನ್ನು ಮತ್ತೊಮ್ಮೆ ಓದಿನೋಡಿದೆ. ಪ್ರಬುದ್ಧ ಕಥೆಗಳಲ್ಲದಿದ್ದರೂ ಸಾಮಾನ್ಯ ಓದುಗನ ಮಟ್ಟವನ್ನು ತಲುಪುವ ಕಥೆಗಳಾಗಿದ್ದವು. ಯಾರನ್ನೂ ಅನುಕರಿಸದ ಪ್ರಾಮಾಣಿಕ ಪ್ರಯತ್ನವಾಗಿತ್ತು. ಎಷ್ಟೋ ಶತಮಾನಗಳಿಂದ ಮನುಷ್ಯ ಕಥೆಗಳನ್ನು ಬರೆಯುತ್ತಿದ್ದಾನೆ. ಆದರೂ ಕಥೆಯ ಮೇಲಿನ ವ್ಯಾಮೋಹ ಕೊನೆಗೊಂಡಿಲ್ಲ.

ಪ್ರಿಯಾಳ ಚೀಟಿ ಹಣ ಸದ್ಯದಲ್ಲೇ ಪುಸ್ತಕ ರೂಪ ತಾಳುತ್ತದೆ. ಇಷ್ಟೆಲ್ಲ ಬರೆದು ಒಂದು ಕಥಾಸಂಗ್ರಹ ಬರದಿದ್ದರೆ ಹೇಗೆ? ನನಗೆ ನಾನೇ ಸಮರ್ಥನೆ, ಕಾರಣಗಳನ್ನು ಕೊಡುತ್ತಾ ಸಮಾಧಾನ ಪಟ್ಟುಕೊಂಡೆ.

ಡಿಟಿಪಿ ಸೆಂಟರಿನ ಕಂಪ್ಯೂಟರ್‌ನ ಫೋಲ್ಡರಿನಲ್ಲಿಟ್ಟು, ಕಥೆಗಳನ್ನು ಭದ್ರಗೊಳಿಸಿದೆ. ಪೇಜ್‌ಮೇಕರ್‌ನ್ನು ಸೆಟ್ ಮಾಡಿ ತುಂಬಿದರೆ ಅಚ್ಚು ಹಾಕಿಸಲು ಕೊಡಬಹುದು. ಹೇಗೂ, ಪ್ರಿಯಾಳ ಚೀಟಿ ಬಿದ್ದ ಕಾಸಿದೆಯಲ್ಲ. ಅವಳು ಹೇಳಿದ್ದು ನಿಜ. ಬಹಳ ವರ್ಷಗಳಿಂದ ನನ್ನ ಕಥಾ ಸಂಗ್ರಹವೊಂದು ಬರಬೇಕೆಂದು ಕನಸು ಕಾಣುತ್ತಿದ್ದೆ. ಪುಸ್ತಕ ಲೋಕಾರ್ಪಣೆ ಮಾಡುವ ದಿನವನ್ನು, ನೆಚ್ಚಿನ ಕಥೆಗಾರ ಅದನ್ನು ಬಿಡುಗಡೆಗೊಳಿಸುವುದು, ಸಭೆ ತುಂಬಾ ಪ್ರಿಯಾ ಓಡಾಡುತ್ತಿರುವುದನ್ನೆಲ್ಲ ಮನಸ್ಸಿನಲ್ಲಿಯೇ ಕಂಡೆ. ಆದರೆ ಯಾರು ಕೊಳ್ಳುತ್ತಾರೆ? ಬೇಡ... ನಕಾರಾತ್ಮಕವಾಗಿ ಚಿಂತಿಸುವುದು ಬೇಡ. ಹುಚ್ಚು ಮನಸ್ಸನ್ನು ಹರಿಯ ಬಿಟ್ಟರೆ, ಹತೋಟಿಯಲ್ಲಿಡುವುದು ಕಷ್ಟ.

ಡಿಟಿಪಿ ಸೆಂಟರ್‌ನಿಂದ ಅರಳೀ ಮರದ ಬಳಿಯಲ್ಲಿ ಓಮನ ಕುಟ್ಟನ್ನಿನ ಗಾಡಿ ಅಂಗಡಿಯತ್ತ ಹೆಜ್ಜೆ ಹಾಕಿದೆ. ಒಂದು ಚಹ ಮತ್ತು ಸಿಗರೇಟಿಗೆ ಆರ್ಡರ್ ಮಾಡಿದೆ. ಅರಳೀ ಮರದ ಬಳಿ ಗಾಳಿಯಾಡುತ್ತಿತ್ತು. ಅದರ ಎಲೆಗಳು ಅಲೆಯಂತೆ ಗಾಳಿಗೆ ನಲಿದಾಡುತ್ತಿದ್ದವು. ಅವಳು ಹೇಳಿದಂತೆ ಕಥೆಗಾರನಿಗೆ ಫೋನ್ ಹಚ್ಚಿದೆ. ಅವರ ಆಫೀಸ್‌ನಲ್ಲಿರುವ ಯಾರೋ ಫೋನ್ ಎತ್ತಿಕೊಂಡರು. ರಾತ್ರಿ ಫೋನ್ ಮಾಡ್ತಾರೆಂದು ಹೇಳಿ ಹೇಳಿ ಕಟ್ ಮಾಡಿದರು.

ರಾತ್ರಿಯಲ್ಲಿ ದೋಸೆ ಹೊಯ್ಯುತ್ತಿದ್ದಾಗ ಕಥೆಗಾರ ನನಗೆ ಫೋನ್ ಮಾಡಿದ. ಪ್ರಿಯಾ ಮತ್ತು ಮಗಳು ಟಿವಿ ನೋಡುತ್ತಾ ಕುಳಿತಿದ್ದಳು. ಕೆಲವೊಮ್ಮೆ ಪ್ರಿಯಾಳಿಗೂ ರೆಸ್ಟ್ ಬೇಕು. ಅಂತಹ ಸಂದರ್ಭದಲ್ಲಿ ಅಡುಗೆಯೆಲ್ಲ ನನ್ನದೆ. ದೋಸೆ ಮಗುಚಿ ಹಾಕಿ ಫೋನ್ ತೆಗೆದುಕೊಂಡೆ. ಕಥೆಗಾರ ನನ್ನ ಕಥೆಗಳಿಗೆ ಆವೇಶ ಭರಿತರಾಗಿ ಪ್ರತಿಕ್ರಿಯಿಸುತ್ತಿದ್ದರು. ಕಥೆಗಳ ಬಗ್ಗೆ ಅವರ ಅಭಿಪ್ರಾಯ ತಿಳಿದಾಗ ನಾನು ಉಬ್ಬಿಹೋದೆ.

'ಮನೋಜ್... ಆದರೂ ಕಾಸು ಕೊಡದೆ ಯಾರೂ ಪುಸ್ತಕ ಪ್ರಕಟಿಸಲಾರರು. ನಿನಗೆ ಸ್ವಲ್ಪ ಡಿಸ್ಕೌಂಟ್ ಕೊಡಲು ಹೇಳ್ತೀನಿ' ಕಥೆಗಾರ ಭರವಸೆ ನೀಡಿದರು.

ಆನಂತರದ ಕೆಲಸ ಕಾರ್ಯಗಳೆಲ್ಲ ತ್ವರಿತವಾಗಿ ಸಾಗಿದವು. ಪಬ್ಲಿಷರ್ ಮ್ಯಾಟರ್ ಕಳುಹಿಸಿಕೊಡಲು ಹೇಳಿದರು. ನನ್ನ ಕಥೆಗಳನ್ನು ಅವರು ಕೇವಲ ಮ್ಯಾಟರ್ ಅಂದಿದ್ದು ನನಗೆ ಇಷ್ಟವಾಗಲಿಲ್ಲ. ಹಿಂದೆ ಯಾರೋ ಒಬ್ಬ ಕಥೆಗಾರ ಹೇಳಿದಂತೆ, ನನ್ನ ಕಥೆಗಳಲ್ಲಿ ರಕ್ತ ಹರಿಯುತ್ತಿದೆ. ಪ್ರಕಾಶಕರು ಕೊಟ್ಟ ಮೇಲ್ ಐಡಿಗೆ ನಾನು ಪೇಜ್‌ಮೇಕರ್ ಫೈಲ್ ಸೆಟ್ ಮಾಡಿ ಕಳುಹಿಸಿ ಕೊಟ್ಟೆ. ಪ್ರಿಯಾಳಿಗೆ ಇಷ್ಟವಾದ ಕಪ್ಪುಕನ್ನಡಕ ಧರಿಸಿದ್ದ ಕೊಂಚ ಗಂಭೀರದಿಂದಿರುವ ಫೋಟೊವನ್ನು ಕಳುಹಿಸಿ ಕೊಟ್ಟೆ. ಲೇಖಕರ ಮುನ್ನುಡಿಯಿಂದಲೇ ಪುಸ್ತಕದ ಹಿಂಬದಿಯಲ್ಲಿ ಬ್ಲರ್ಬ್ ಹಾಕುತ್ತಾರೆ.